ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE: 10/3/21

# ಮಹಾನ್ ನಾಯಕನ ವಿರುದ್ಧ ಜಾರಕಿಹೊಳಿ ಕೆಂಗಣ್ಣು

ಸಂ.ಕ.ಸಮಾಚಾರ ಬೆಂಗಳೂರು

ರಾಜ್ಯದ ಮಹಾನ್ ನಾಯಕನೊಬ್ಬ ತಮ್ಮ ವಿರುದ್ಧದ ರಾಸಲೀಲೆ ಸಿ.ಡಿ.ಷಡ್ಯಂತ್ರದಲ್ಲಿ ಭಾಗಿಯಾಗಿದ್ದು, ಇದರ ಹಿಂದಿರುವಪ್ರತಿಯೊಬ್ಬರನ್ನೂ ಜೈಲಿಗೆ ಹಾಕಿಸದೇ ವಿರಮಿಸುವುದಿಲ್ಲ ಎಂದು ಮಾಜಿ ಸಚಿವ ರಮೇಶ್ ಜಾರಕಿಹೊಳಿ ಶಪಥಗೈದಿದ್ದಾರೆ.



ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಇದೇ ಮೊದಲ ಬಾರಿಗೆ ಮಂಗಳವಾರ ಸದಾಶಿವ ನಗರದ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮ ವಿರುದ್ಧ ನಕಲಿ ಸಿ.ಡಿ. ಬಳಸಿ ತಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಸಂಚು ರೂಪಿಸಲಾಗಿದೆ ಎಂದು ಗದ್ಗದಿತರಾದರು.

ನಾನು ಮಂತ್ರಿಯಾದರೆ ಮೂರು ತಿಂಗಳು ಕೂಡ ನಿಭಾಯಿಸುವುದಿಲ್ಲ ಎಂದು ಆ ಮಹಾನ್ ನಾಯಕ ಹೇಳಿದ್ದ. ನನ್ನ ಮಂತ್ರಿಗಿರಿ ಕಿತ್ತುಕೊಳ್ಳಲೆಂದೇ ನನ್ನ ವಿರುದ್ಧ ಆ ಮಹಾನ್ ನಾಯಕ ಷಡ್ಯಂತ್ರ ಮಾಡಿದ್ದಾನೆ. ಈ ಪ್ರಕರಣದಲ್ಲಿ ಯಾರ್‍ಯಾರು ಭಾಗಿಯಾಗಿದ್ದಾರೆ ಎಂಬ ಬಗೆಗೆ ನನಗ ಖಚಿತ ಮಾಹಿತಿ ಇದೆ. ಒರಾಯನ್ ಮಾಲ್‌ನ ಐದನೇ ಮಹಡಿಯಲ್ಲಿರುವವರು ಹಾಗೂ ಯಶವಂತಪುರ ಪೊಲೀಸ್ ಠಾಣೆ ಪಕ್ಕದ ನಾಲ್ಕನೇ ಮಹಡಿಯಲ್ಲಿವವರು ಷಡ್ಯಂತ್ರದಲ್ಲಿ ಭಾಗಿಯಾಗಿದ್ದಾರೆ. ನನ್ನ ವಿರುದ್ಧ ನಕಲಿ ಸಿ.ಡಿ. ತಯಾರಿಕೆಗೆ 20 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಯುವತಿಯನ್ನು ಕರೆದೊಯ್ದು ದುಬೈನಲ್ಲಿ ಇರಿಸಲಾಗಿದ್ದು, ಆಕೆಗೆ ಎರಡು ಫ್ಲ್ಯಾಟ್‌ಗಳನ್ನು ಕೂಡ ಕೊಟ್ಟಿರುವ ಬಗೆಗೆ ಮಾಹಿತಿ ಸಿಕ್ಕಿದೆ. ಈ ಬಗ್ಗೆ ಸಮಗ್ರ ತನಿಖೆ ಆಗಬೇಕು, ಇದರಲ್ಲಿ ಭಾಗಿಯಾದ ವರಿಗೆ ಶಿಕ್ಷೆ ಆಗಬೇಕು ಎಂದು ಆಗ್ರಹಿಸಿದರು.

- ಯಾವ ಅಪಾರ್ಟ್‌ಮೆಂಟ್‌ನ ಯಾವ ಮಹಡಿಯಲ್ಲಿ ಷಡ್ಯಂತ್ರ
- ಯುವತಿಗೆ 20 ಕೋಟಿ ಆಮಿಷ ಒಡ್ಡಿರುವ ಆರೋಪ

ನಾನು ಅಪರಾಧಿಯಲ್ಲ, ನಾನು ಯಾವುದೇ ತಪ್ಪು ಮಾಡಿಲ್ಲ. ನನಗೆ ನನ್ನ ಕುಟುಂಬದ ಮರ್ಯಾದೆ ಮುಖ್ಯ. ನಾನು ಮತ್ತೆ ರಾಜಕಾರಣಕ್ಕೆ ಬರುತ್ತೇನೋ ಇಲ್ಲವೋ ಗೊತ್ತಿಲ್ಲ. ಕೇವಲ ಅಧಿಕಾರ ಅಷ್ಟೇ ಮುಖ್ಯವಲ್ಲ. ನಮ್ಮದು ರಾಜಮನೆತನ. ನಮ್ಮ ಕುಟುಂಬದ ಗೌರವ ವಾಪಸ್ ಬರಬೇಕು. ಆ ಗೌರವ ವಾಪಸ್ ಬರಬೇಕಾದರೆ ನಾನು ನಿರಪರಾಧಿ ಎಂಬುದು ತನಿಖೆಯಿಂದ ಸಾಬೀತಾಗಬೇಕು. ತಪ್ಪಿತಸ್ಥರನ್ನು ಜೈಲಿಗೆ ಕಳಿಸಬೇಕು ಎಂದು ಹೇಳಿದರು.

ನನ್ನ ವಿರುದ್ಧ ಭಾರಿ ಷಡ್ಯಂತ್ರ ನಡೆದಿದೆ ಎಂಬುದು ನಾಲ್ಕು ತಿಂಗಳು ಮೊದಲೇ ಗೊತ್ತಾಗಿತ್ತು. ಮಾಜಿ ಶಾಸಕ ನಾಗರಾಜು ಅವರು ನನಗೆ ಮೊದಲೇ ಹೇಳಿದ್ದರು. ನಾನು ಯಾವುದೇ ತಪ್ಪು ಮಾಡಿಲ್ಲವಾದ್ದರಿಂದ ನಾನು ಷಡ್ಯಂತ್ರದ ಬಗೆಗೆ ಗಂಭೀರವಾಗಿ ಯೋಚಿಸಲಿಲ್ಲ. ಅಷ್ಟೇ ಅಲ್ಲ, ನನ್ನ ವಿರುದ್ಧ ದೂರು ನೀಡುವ 26 ಗಂಟೆಗಳ ಮೊದಲೇ ನನಗೆ ಪಕ್ಷದ ರಾಷ್ಟ್ರೀಯ ವರಿಷ್ಠರಿಂದ ಎಚ್ಚರಿಕೆ ಸಂದೇಶ ಬಂದಿತ್ತು. ನನಗೆ ಧೈರ್ಯ ತುಂಬುವ ಮಾತುಗಳನ್ನಾಡಿದ್ದರು. ದೂರು ದಾಖಲಾದನಂತರ ಸಿಎಂ ಯಡಿಯೂರಪ್ಪನವರ ಬಳಿ ನಾನೇ ತೆರಳಿ ಚರ್ಚಿಸಿದೆ. ನನ್ನನ್ನು ಯಾರೂ ರಾಜೀನಾಮೆ ಕೇಳಲಿಲ್ಲ. ನಾನೇ ರಾಜೀನಾಮೆ ಕೊಟ್ಟೆ. ನನ್ನ ಮೇಲೆ ಬಂದಿರುವ ಆರೋಪವನ್ನು ಧೈರ್ಯದಿಂದ ಎದುರಿಸಿ ಹೊರಬರುತ್ತೇನೆ ಎಂದರು.